# ಲಂಡನ್ ಐ

## ಥೇಮ್ಸ್ ನದಿದಂಡೆಯ ಸೂಜಿಗಲ್ಲು




ಲಂಡನ್ ನಗರದ ಎಲ್ಲ ಮೂಲೆಗಳಿಂದಲೂ ಕಾಣುವ 'ಲಂಡನ್ ಐ' ನೋಡದಿದ್ದರೆ ಆ ಪ್ರವಾಸವೇ ವ್ಯರ್ಥ ಎನ್ನಬಹುದೇನೋ... ಥೇಮ್ಸ್ ನದಿಯ ಸೊಬಗು, ಪ್ರವಾಸಿಗರಿಂದ ತುಂಬಿ ತುಳುಕುವ ಲಾಂಚ್‌ಗಳು, ಲೋಕ ಮರೆಯುವ ಗಂಡು ಹೆಣ್ಣು ಜೋಡಿಗಳ ದೃಶ್ಯಗಳನ್ನು 'ಲಂಡನ್ ಐ'ನಿಂದ ಕಣ್ತುಂಬಿಸಿಕೊಳ್ಳಬಹುದು.

■ ಡಾ. ನಿರಂಜನ ವಾನಳ್ಳಿ

ಲಂಡನ್ ನಗರ ಬೆಳೆದಿರುವುದೇ ಥೇಮ್ಸ್ ನದಿ ದಂಡೆ ಮೇಲೆ. ನಗರದ ಮಧ್ಯ ಭಾಗದಲ್ಲಿ ಹರಿಯುವ ಥೇಮ್ಸ್ ನದಿಯ ಚಿತ್ರಣ ಅದೆಷ್ಟು ಇಂಗ್ಲಿಷ್ ಕವಿಗಳಿಗೆ ಸ್ಫೂರ್ತಿ ಕೊಟ್ಟಿದೆಯೋ, ಅದೆಷ್ಟು ಕಥೆ ಕಾದಂಬರಿಗಳಲ್ಲಿ ವರ್ಣಿಸಲ್ಪಟ್ಟಿದೆಯೋ ಲೆಕ್ಕವಿಲ್ಲ. ಥೇಮ್ಸ್ ನದಿಯಿಲ್ಲದೇ ಲಂಡನ್ ನಗರವಿಲ್ಲ.

ಇವತ್ತಿಗೂ ಲಂಡನ್ ನಗರದ ಪ್ರವಾಸವೆಂದರೆ ಅದು ಥೇಮ್ಸ್ ನದಿ ದಂಡೆಯನ್ನೇ ಸುತ್ತುತ್ತದೆ. ಥೇಮ್ಸ್ ಸೇತುವೆ, ನದಿ ದಂಡೆಯಲ್ಲಿರುವ ವೆಸ್ಟ್ ಮಿನ್ಸ್ಟರ್ ಅಬೇ, ಅಂದರೆ ದೊಡ್ಡ ಗಡಿಯಾರದ ಗೋಪುರ, ಪಾರ್ಲಿಮೆಂಟ್ ಭವನ, ಅಲ್ಲೇ ಮುಂದಕ್ಕೆ ಬಂದರೆ ಬಕಿಂಗ್‌ಹ್ಯಾಮ್ ಅರಮನೆ ಮುನ್ನೂರು ನಾನೂರು ವರ್ಷಗಳಿಂದ ಲಂಡನ್ ನಗರದ ಜೊತೆ ಅವಿನಾಭಾವ ಸಂಬಂಧ ಹೊಂದಿರುವ ಈ ದೃಶ್ಯಗಳಿಲ್ಲದೇ ಲಂಡನ್ ನಗರದ ದರ್ಶನ ಪೂರ್ಣಗೊಳ್ಳುವುದೇ ಇಲ್ಲ.

ಈ ದೃಶ್ಯಗಳಿಗೆ ಇತ್ತೀಚೆಗೆ ಸೇರಿಕೊಂಡಿರುವ ಇನ್ನೊಂದು ಆಕರ್ಷಣೆ 'ಲಂಡನ್ ಐ'. ಲಂಡನ್

